## 2 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು

## ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ.

**ದಿಃ 22.04.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ 1 ನೇ ಪ್ರತಿವಾದಿ ಪರ ವಕೀಲರಿಂದಃ**

ಪ್ರತಿವಾದಿ ನಂ.1 ರಿಂದ 3 ರವರು ತಮ್ಮ ಹೆಸರಿಗೆ ಬಂದ ಆಸ್ತಿಗಳ ಮೇಲೆ ಸಾಲ ಮಾಡಿಕೊಂಡು ಸಾಲ ತೀರಿಸಿಕೊಳ್ಳುತ್ತ ಬಂದಿರುತ್ತಾರೆ ಎಂದರೆ ಸಾಕ್ಷಿ ಅದು ನಮ್ಮ ಅಜ್ಜನ ಆಸ್ತಿ ಅದರ ಮೇಲೆ ಯಾವುದೇ ಸಾಲ ಇರುವುದಿಲ್ಲ ಎನ್ನುತ್ತಾರೆ. ಸಾಲ ಇಲ್ಲ ಎಂಬುದನ್ನು ನಿಮಗೆ ಯಾರು ತಿಳಿಸಿದರು ಎಂದರೆ ಸಾಕ್ಷಿ ಅವರು ಸಾಲ ಮಾಡಿಕೊಂಡಿರುವುದು ನನಗೆ ಗೊತ್ತಿಲ್ಲ ಎನ್ನುತ್ತಾರೆ.

1 ನೇ ಪ್ರತಿವಾದಿ ಗುರುಸಿದ್ದಪ್ಪ ಇವರು 12 ನೇ ಪ್ರತಿವಾದಿ ಮತ್ತು 13 ನೇ ಪ್ರತಿವಾದಿಗಳಿಗೆ ಯಾವ ಆಸ್ತಿಗಳನ್ನು ಮಾರಾಟ ಮಾಡಿದ್ದರು ಎಂದು ಗೊತ್ತಿದೆಯಾ ಎಂದರೆ ಸಾಕ್ಷಿ ಗೊತ್ತಿಲ್ಲ ಎನ್ನುತ್ತಾರೆ. ಅದನ್ನು ಯಾವಾಗ ಮತ್ತು ಎಷ್ಟು ವಿಸ್ತೀರ್ಣ ಮಾರಾಟ ಮಾಡಿದರು ಎಂದು ನನಗೆ ಗೊತ್ತಿಲ್ಲ. ಪ್ರತಿವಾದಿ ನಂ.1 ರವರು ಪ್ರತಿವಾದಿ ನಂ.14 ರವರಿಗೆ ಯಾವ ಆಸ್ತಿಯನ್ನು ಎಷ್ಟು ವಿಸ್ತೀರ್ಣ ಮಾರಾಟ ಮಾಡಿರುತ್ತಾರೆ ಎಂದು ಗೊತ್ತಿದೆಯಾ ಎಂದರೆ ಸಾಕ್ಷಿ ಸರ್ವೆ ನಂ.176 ರಲ್ಲಿ ಮಾರಾಟ ಮಾಡಿರುತ್ತಾರೆ ಆದರೆ ಎಷ್ಟು ಮಾರಾಟ ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ ಎನ್ನುತ್ತಾರೆ. ನೀವು ಹೇಳಿದ ಪ್ರಕಾರ ನಿಮ್ಮ ದಾವಾ ಆಸ್ತಿಗಳಲ್ಲಿ ನಿಮಗೆ ಎಷ್ಟು ಹಿಸ್ಸೆ ಬರುತ್ತದೆ ಎಂದರೆ ಸಾಕ್ಷಿ 5 ಮಂದಿ ಇದ್ದು ಅದರಲ್ಲಿ ಒಂದು ಭಾಗ ಬರುತ್ತದೆ ಎನ್ನುತ್ತಾರೆ. 5 ಮಂದಿ ಎಂದರೆ ಯಾರು ಯಾರು ಎಂದರೆ ಸಾಕ್ಷಿ ನನ್ನ ತಾಯಿ, ನನ್ನ ದೊಡ್ಡಮ್ಮ, ನನ್ನ ಮಾವಂದಿರು 3 ಮಂದಿ ಎನ್ನುತ್ತಾರೆ. ನೀವು ಹೇಳುವ ರೀತಿ ಒಂದರಲ್ಲಿ ಐದು ಎಂದರೆ ಅದು ನಿಮ್ಮ ತಾಯಿಗೆ ಬರುವ ಹಿಸ್ಸೆ ಹಾಗಾದರೆ ನಿಮಗೆ ಎಷ್ಟು ಹಿಸ್ಸೆ ಎಂದರೆ ಸಾಕ್ಷಿ ನನಗೆ ಬರುವುದು ಗೊತ್ತಿಲ್ಲ ಎನ್ನುತ್ತಾರೆ. ನನ್ನ ಮುಖ್ಯ ವಿಚಾರಣೆಯ ಖಂಡಿಕೆ ನಂ.7 ಮತ್ತು 8 ರಲ್ಲಿ ನನಗೆ ಬರುವ 1/5 ಹಿಸ್ಸೆಗೆ ಬಂಧನಕಾರಿಯಲ್ಲ ಎಂದು ಬರೆಸಿದ್ದು ಅದನ್ನು ಯಾವ ಆಧಾರದ ಮೇಲೆ ಬರೆಸಿದ್ದೀರಿ ಎಂದರೆ ಸಾಕ್ಷಿ ನನ್ನ ತಾಯಿ ಇದ್ದಾಗ ಬರೆಸಿದ್ದು ಅವರು ತೀರಿಕೊಂಡ ನಂತರ ನಾನು ಬಂದಿರುತ್ತೇನೆ ಆ ಕಾರಣಕ್ಕೆ ನನಗೆ ಗೊತ್ತಿಲ್ಲ ಎನ್ನುತ್ತಾರೆ. ದಾವಾ ಆಸ್ತಿಗಳು ವಾದಿ ಮತ್ತು ಪ್ರತಿವಾದಿಯ ಜಂಟಿ ಕುಟುಂಬದ ಎಕತ್ರ ಘರಾಣೆದ ಆಸ್ತಿಗಳು ಎಂದು ತೋರಿಸಲು ಯಾವುದೇ ದಾಖಲೆಯನ್ನು ಹಾಜರಪಡಿಸಿಲ್ಲ

ಎಂದರೆ ಸಾಕ್ಷಿ ಹಾಜರಪಡಿಸಿದ್ದೇವೆ ಎನ್ನುತ್ತಾರೆ. ಸಾಕ್ಷಿಗೆ ತಾವು ಗುರುತಿಸಿಕೊಂಡ ದಾಖಲೆಗಳನ್ನು ತೋರಿಸಿ ಇದರಲ್ಲಿ ಸದರಿ ಆಸ್ತಿಗಳು ನಿಮ್ಮ ಅಜ್ಜನ ಆಸ್ತಿ ಎಂದು ತೋರಿಸಲು ಯಾವ ದಾಖಲೆ ಇದೆ ಎಂದರೆ ಸಾಕ್ಷಿ ನನಗೆ ಗೊತ್ತಾಗುತ್ತಿಲ್ಲ ಎನ್ನುತ್ತಾರೆ. ಅಸಲು ದಾವಾ ನಂ.309/1988 ರಲ್ಲಿ ನನ್ನ ತಾಯಿಗೆ ಬಂದಂತಹ ಪ್ಲಾಟುಗಳನ್ನು ಅವರು ಮಾರಾಟ ಮಾಡಿರುತ್ತಾರೆ ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. ದಾವಾ ಆಸ್ತಿಗಳನ್ನು ಬಿಟ್ಟು ಉಣಕಲ್ ಗ್ರಾಮದ ಮ್ಯಾಗೇರಿ ಓಣಿಯಲ್ಲಿ ಒಂದು ಮನೆ ಇದೆ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ನನ್ನ ತಂದೆಯ ಅಣ್ಣತಮ್ಮಂದಿರು 5 ಜನ ಇರುತ್ತಾರೆ. ಅವರ ಹೆಸರುಗಳು ಯಲ್ಲಪ್ಪ, ಸಿದ್ದಪ್ಪ, ಬಸಪ್ಪ, ಮಾರುತಿ, ನಾಗವ್ವ, ಸಣ್ಣಬಸಪ್ಪ ಅಂದರೆ ನನ್ನ ತಂದೆ. ಮ್ಯಾಗೇರಿ ಓಣಿಯಲ್ಲಿ ಇರುವ ಮನೆ ನನ್ನ ದೊಡ್ಡಮ್ಮನ ಮಕ್ಕಳದು ನಮ್ಮದಲ್ಲ ಎನ್ನುತ್ತಾರೆ. ಅಸಲು ದಾವಾ ನಂ.309/1988 ರ ರಾಜೀಯ ಪ್ರಕಾರ ನನ್ನ ತಾಯಿಗೆ ಒಂದು ಪ್ಲಾಟ್ ಕೊಟ್ಟಿದ್ದರು ಎಂದರೆ ಸರಿ. ಅದು ಸರ್ವೆ ನಂ.197 ಆಗಿರುತ್ತದೆ. ಸದರಿ ಪ್ಲಾಟ್‌ನ್ನು ಮಾರಲಾಗಿದೆ ಎಂದರೆ ಸರಿ.

ನೀವು ಯಾವ ತಾರೀಕಿನಂದು ನಿಮ್ಮ ತಾಯಿಗೆ ಬರುವ ಹಿಸ್ಸೆಯನ್ನು ಕೇಳಿದಿರಿ ಎಂದು ಹೇಳಲು ಆಗುತ್ತದೆಯಾ ಎಂದರೆ ಸಾಕ್ಷಿ 5 ವರ್ಷದ ಹಿಂದೆ ನನ್ನ ತಾಯಿಗೆ paralysis ಆದಾಗ ಕೇಳಿರುತ್ತೇನೆ ಎನ್ನುತ್ತಾರೆ. ಆ ಸಮಯದಲ್ಲಿ ಯಾರು ಯಾರು ಇದ್ದರು ಎಂದರೆ ಸಾಕ್ಷಿ ಆ ಸಮಯದಲ್ಲಿ ನಾನು ಇರಲಿಲ್ಲ ಅದರೆ ನನ್ನ ತಾಯಿಯನ್ನು ಮಾತನಾಡಿಸಲು ಬಂದಾಗ ಕೇಳಿರುತ್ತಾರೆ ಎಂದು ನುಡಿಯುತ್ತಾರೆ. ಮೊದಲೇ ನಮ್ಮ ನಡುವೆ ಪಾಲುವಿಭಾಗ ಆಗಿರುವ ಕಾರಣ ಮತ್ತೆ ಪಾಲುವಿಭಾಗ ಮಾಡಿ ಕೊಡಿ ಎಂದು ಪ್ರತಿವಾದಿ ನಂ.1 ರಿಂದ 3 ರವರಿಗೆ ಕೇಳುವ ಪ್ರಮೇಯ ಬರುವುದಿಲ್ಲ ಎಂದರೆ ಸಾಕ್ಷಿ ನನ್ನ ತಾಯಿ ಆಗಲೇ ಕೇಳುತ್ತಿದ್ದರು ಎನ್ನುತ್ತಾರೆ. ದಾವಾ ಆಸ್ತಿಯಲ್ಲಿ ನಾವು ಸಾಮೂಹಿಕ ಮಾಲ್ಕೀ ಕಬ್ಜಾವಹಿವಾಟಿನಲ್ಲಿ ಇದ್ದೇವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸಾಕ್ಷಿ ವಹಿವಾಟಿನಲ್ಲಿ ಇದ್ದಾರೆ ಎನ್ನುತ್ತಾರೆ. ದಾವಾ ಆಸ್ತಿಯಲ್ಲಿ ಪಾಲು ಕೇಳುವ ಕಾನೂನಿನ ಹಕ್ಕು ಇಲ್ಲದಿದ್ದರೂ ಕೂಡ ಸುಳ್ಳು ದಾವಾ ಸಲ್ಲಿಸಿ ಪ್ರತಿವಾದಿಯರಿಗೆ ತೊಂದರೆ ಕೊಡುತ್ತಿದ್ದೇನೆ ಎಂದರೆ ಸಾಕ್ಷಿ ಹಕ್ಕಿದೆ ಎಂದು ಬಂದಿದ್ದೇನೆ ಎನ್ನುತ್ತಾರೆ.

ಸರ್ವೆ ನಂ.750/1 ಪೂಜಾರಿಕೆ ಜಮೀನು ಇರುವ ಕಾರಣ ಟ್ರಸ್ಟನವರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸದರಿ ಜಮೀನು ಪೂಜಾರಿಕೆ ಜಮೀನಿನಲ್ಲ ಪಿತ್ರಾರ್ಜಿತ ಜಮೀನು ಎನ್ನುತ್ತಾರೆ. ದಾವಾದಲ್ಲಿ ಆಗಲೀ ಅಥವಾ ನನ್ನ ಮುಖ್ಯವಿಚಾರಣೆಯ ಪ್ರಮಾಣಪತ್ರದಲ್ಲಾಗಲೀ ದಾವಾ ಆಸ್ತಿಗಳ ಚಕಬಂದಿಯನ್ನು ಬರೆಸಿಲ್ಲ ಎಂದರೆ ಸಾಕ್ಷಿ ಬರೆಸಿದ್ದೇನೆ ಎನ್ನುತ್ತಾರೆ. ಚಕಬಂದಿ ಬರೆಯದೇ ಇರುವ ಕಾರಣ ಆಸ್ತಿಗಳ ಗುರುತು ಹಚ್ಚುವಿಕೆ

ಆಗುವುದಿಲ್ಲ ಎಂದರೆ ಸಾಕ್ಷಿ ಬರೆಸಿದ್ದೇನೆ ಎನ್ನುತ್ತಾರೆ. ಪ್ರತಿವಾದಿ ನಂ.1 ತಮ್ಮ ಸ್ವಂತ ಹಣದಿಂದ ಆಸ್ತಿ ಹಿಡಿದ ಕಾರಣ ಆ ಆಸ್ತಿಯಲ್ಲಿ ಹಕ್ಕು ಕೇಳಲು ನಮಗೆ ಯಾವುದೇ ಅಧಿಕಾರ ಇಲ್ಲ ಎಂದರೆ ಸಾಕ್ಷಿ ನನ್ನ ಅಜ್ಜನ ಆಸ್ತಿಯಲ್ಲಿ ದುಡಿದು ಉಳಿದ ಆಸ್ತಿಯನ್ನು ಖರೀದಿ ಹಿಡಿದಿದ್ದಾರೆ ಎನ್ನುತ್ತಾರೆ.

ಪ್ರತಿವಾದಿ ನಂ.1 ರವರು ಪ್ರತಿವಾದಿ ನಂ.12 ರಿಂದ 14 ರವರಿಗೆ ಆಸ್ತಿ ಮಾರಾಟ ಮಾಡಿದ್ದು 2008 ಆಗಿದ್ದು ನಾನು ದಾವಾ ವಿಳಂಬವಾಗಿ ಮಾಡಿರುವ ಕಾರಣ ದಾವಾ ಊರ್ಜಿತವಲ್ಲ ಎಂದರೆ ಸಾಕ್ಷಿ ಪಿತ್ರಾರ್ಜಿತ ಆಸ್ತಿ ಎನ್ನುತ್ತಾರೆ.

ದಾವಾದ ಆಸ್ತಿಯಲ್ಲಿ ನೀವು ಪ್ರತ್ಯೇಕ್ಷ ಕಬ್ಜಾ ಇರದ ಕಾರಣ ಮತ್ತು ಸರಿಯಾದ ನ್ಯಾಯಾಲಯದ ಶುಲ್ಕ ತುಂಬಿರದ ಕಾರಣ ನಾನು ದಾವೆಯಲ್ಲಿ ಕೇಳಿರುವ ಪರಿಹಾರ ಪಡೆಯಲು ಅರ್ಹನಲ್ಲ ಎಂದರೆ ಸರಿಯಲ್ಲ. ಸದರಿ ದಾವೆಯ ಬಗ್ಗೆ ಹಾಗೂ ಹಿಂದೆ ಸಲ್ಲಿಸಿದ ದಾವೆಯ ಬಗ್ಗೆ ನನಗೆ ಸರಿಯಾದ ಮಾಹಿತಿ ಇಲ್ಲದಿರುವ ಕಾರಣ ನಾನು ಯಾವುದೇ ಪರಿಹಾರ ಪಡೆಯಲು ಅರ್ಹನಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯರಿಗೆ ತೊಂದರೆ ಕೊಡುವ ಉದ್ದೇಶದಿಂದ ನಾನು ಸುಳ್ಳು ದಾವಾ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗಾಗಲೀ ನನ್ನ ತಾಯಿಗಾಗಲೀ ದಾವಾ ಆಸ್ತಿಗಳಲ್ಲಿ ಯಾವುದೇ ಪಾಲು ಕೇಳಲು ಬರುವುದಿಲ್ಲ ಎಂದರೆ ಸಾಕ್ಷಿ ನನ್ನ ತಾಯಿಯ ತಂದೆಯ ಆಸ್ತಿ ಕೇಳುತ್ತಿದ್ದೇನೆ ಎನ್ನುತ್ತಾರೆ.

**ಮರುವಿಚಾರಣೆ ಇಲ್ಲ.**

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೆ ಸರಿ ಇದೆ.

Sd/-

**2 ನೇ ಅಧಿಕ ಹಿ.ದಿ.ನ್ಯಾ.ಹುಬ್ಬಳ್ಳಿ.**